**ಓ.ಎಸ್. ನಂ. 328/2014 ಡಿ.ಡಬ್ಲೂ-1 ಹೆಸರು -ವೀರಭದ್ರಪ್ಪ**

**ಸಾಕ್ಷಿಯನ್ನು ದಿನಾಂಕಃ 28/06/2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀಮತಿ ಬಿ.ಹೆಚ್.ವಿ 3 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು ಶಾಲಾ ಶಿಕ್ಷಕವಾಗಿ ಕಾರ್ಯ ನಿರ್ವಹಿಸುತ್ತಿದ್ದೆ. 1 ನೇ ಪ್ರತಿವಾದಿಯ ತಂದೆ ಯಾವಾಗ ತೀರಿಕೊಂಡರು ಎಂದು ನನಗೆ ಸರಿಯಾಗಿ ನೆನಪಿಲ್ಲ. 1 ನೇ ಪ್ರತಿವಾದಿಗೆ ದುಷ್ಚಟಗಳು ಇದ್ದವು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅನಕ್ಷರಸ್ಥ ಎಂದರೆ ಸರಿಯಲ್ಲ. ಮರಪ್ಪ ತೀರಿಕೊಂಡಿದ್ದು ದಿಃ15.03.2000 ಎಂದರೆ ನನಗೆ ನೆನಪಿಲ್ಲ. ಕ್ರಯ ಪತ್ರದ ದಿನಾಂಕಃ 20.03.2000 ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆ ಊರಿನ ಯಜಮಾನರಾಗಿದ್ದರು ಎಂದರೆ ಸರಿಯಲ್ಲ. ಮರಪ್ಪ ತೀರಿಕೊಂಡ 5 ದಿನಗಳ ನಂತರ ಮೋಸದಿಂದ ಕ್ರಯ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕ್ರಯಪತ್ರ ನಾನೇ ಮಾಡಿಸಿದ್ದು ಎಂದರೆ ಸರಿ. 1 ನೇ ಪ್ರತಿವಾದಿ ನನಗೆ ಸಂಬಂಧಿ ಎಂದರೆ ಸರಿ. 1 ನೇ ಪ್ರತಿವಾದಿ ನನಗೆ ಸಂಬಂಧಿಯಾದ್ದರಿಂದ ಅವರ ಮನೆಯ ಎಲ್ಲಾ ವಿಚಾರಗಳು ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ನಾನು ಕ್ರಯಪತ್ರ ಮಾಡಿಸಿಕೊಳ್ಳುವ ಮುಂಚೆ 10,000 ರೂ ಗಳಿಗೆ ಭೋಗ್ಯ ಪತ್ರ ಮಾಡಿಸಿಕೊಂಡಿದ್ದೆ. ಭೋಗ್ಯ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಭೋಗ್ಯ ಪತ್ರ ಆದ ನಂತರ 1 ನೇ ಪ್ರತಿವಾದಿಯು ನನ್ನಲ್ಲಿ ಹೆಚ್ಚಿನ ಹಣ ಕೇಳಿದಾಗ ಮತ್ತೊಮ್ಮೆ ಭೋಗ್ಯ ಪತ್ರ ಬರೆಸಿಕೊಳ್ಳುವುದಾಗಿ ಹೇಳಿ 1 ನೇ ಪ್ರತಿವಾದಿಯನ್ನು ನೊಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿ ಮೋಸದಿಂದ ಕ್ರಯ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮನೆಯ ಯಾವ ಜವಾಬ್ದಾರಿಗಳು ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ದುಶ್ಚಟದ ಕಾರಣಗಳಿಗಾಗಿ ಅವರ ಮಕ್ಕಳು ಅವರ ಅಜ್ಜಿಯ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಕ್ರಯ ಪತ್ರ ಆದ ದಿನ 39,000 ರೂಗಳನ್ನು ನೀಡಿ ಭೋಗ್ಯದ ಹಣ 10,000 ರೂಗಳನ್ನು ಕ್ರಯದ ಪ್ರತಿಫಲಕ್ಕೆ ಮುರಿದುಕೂಳ್ಳಲಾಗಿರುತ್ತದೆ. ಕ್ರಯ ಪತ್ರದ ಬಿಕ್ಲಾಂ ದಾರರು ನನಗೆ ಆತ್ಮೀಯರು ಎಂದರೆ ಸರಿಯಲ್ಲ. ನಾನು ಆಗಾಗ ಬಿಕ್ಲಾಂ ದಾರರ ಮನೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಿಡಿ-1 ಕ್ಕೆ ಸಾಕ್ಷಿದಾರರಾಗಿ ಶಿವರಾಮಪ್ಪ ಮತ್ತು ಗುರುಸ್ವಾಮಿರವರು ರುಜು

ಮಾಡಿದ್ದಾರೆ. ಶಿವರಾಮಪ್ಪ ತೀರಿಕೊಂಡಿದ್ದಾರೆ. 3 ನೇ ಪ್ರತಿವಾದಿಯು ಅವರ ಸಹೋದರಿಯರ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಕ್ಕಳ ಮದುವೆಯನ್ನು 3 ನೇ ಪ್ರತಿವಾದಿಯವರೇ ಮಾಡಿರುತ್ತಾರೆ. 1 ನೇ ವಾದಿಯ ಮದುವೆ ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. ತನ್ನ ಸಹೋದರಿಯರ ಮದುವೆ ಕಾಲಕ್ಕೆ 3 ನೇ ಪ್ರತಿವಾದಿಯು ದುಡಿಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಭೋಗ್ಯ ಪತ್ರ ಮಾಡಿಸಿಕೊಳ್ಳುವುದಾಗಿ ಹೇಳಿ ಮೋಸದಿಂದ ಕ್ರಯ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಅನಕ್ಷರಸ್ಥರಾದ್ದರಿಂದ ಪತ್ರದಲ್ಲಿ ಏನು ಬರೆದಿದೆ ಎಂದು ತಿಳಿಯದೇ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**